ಸಿ.ಸಿ ನಂಬ್ರಃ 1514/2023
ಪಿ.ಡಬ್ಲ್ಯೂ : 1

ದಿನಾಂಕಃ 08-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಮುಂದುವರಿದ ಪಾಟೀ ಸವಾಲು: ಆರೋಪಿ ಪರ ಶ್ರೀ ಎಮ್. ಎಮ್.ಎಚ್ ವಕೀಲರಿಂದ

1. ನಾನು ಸಾಲ ಕೊಟ್ಟಿದ್ದು ದಿನಾಂಕ 31-03-2021 ರಂದು. ಈ ಪ್ರಕರಣದ ಚೆಕ್ ನ್ನು ಕೊಟ್ಟಿದ್ದು ದಿನಾಂಕ 22-05-2023 ರಂದು. ಮೇ ಯಲ್ಲಿ ಕೊಟ್ಟ ಚೆಕ್ ನ್ನು ಜುಲೈ ನಲ್ಲಿ ಹಾಜರು ಪಡಿಸಿರುತ್ತೇನೆ. ಸಾಲದ ಅವಧಿ ಮುಗಿದ ಮೇಲೆ ಹಾಜರು ಪಡಿಸುವಂತೆ ಹೇಳಿದ್ದರ ಮೇರೆಗೆ ಜುಲೈಯಲ್ಲಿ ಹಾಜರು ಪಡಿಸಿರುತ್ತೇನೆ. ಚೆಕ್ ನಲ್ಲಿ ಬರೆದ ಮೊತ್ತ ನನಗೆ ಬರಬೇಕಾದ ಮೊತ್ತವಾಗಿರುತ್ತದೆ. ಚೆಕ್ ನ್ನು ಕೊಟ್ಟಾಗ ಸಾಲದ ವಾಯಿದೆ ಮುಗಿಯದೇ ಇದ್ದಿದ್ದರಿಂದ ಅದನ್ನು ಜುಲೈ ನಲ್ಲಿ ಹಾಜರು ಪಡಿಸಿರುತ್ತೇನೆ. ಸಾಕ್ಷಿ ಒಂದು ಕಂತು ಆಗಿದ ನಂತರ ಚೆಕ್ ನ್ನು ತೆಗೆದುಕೊಂಡಿದ್ದು 3 ಕಂತು ಆಗುವವರೆಗೂ ಕಾಯಿದು ಆ ನಂತರ ಚೆಕ್ ನ್ನು ಬ್ಯಾಂಕಿಗೆ ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

2. 2021 ರಲ್ಲಿ ನೀಡಿದ ಸಾಲಕ್ಕೆ ಎ.ಒ.ಡಿ(ರಶೀದಿ) ಯನ್ನು ನಾನು ಪಡೆದುಕೊಂಡಿರುವುದಿಲ್ಲ. ಪಿರ್ಯಾದಿಯಲ್ಲಿ ನಮೂದಿಸಿರುವ ಚೆಕ್ ಸಾಲದ ಅರ್ಜಿ ಖಾತೆ ನಿ.ಪಿ.6 ರಲ್ಲಿ ಕಂಡು ಬರುತ್ತದೆ ಎಂದರೆ ಸರಿ. ಸದರಿ ಚೆಕ್ ನ್ನು ಸೆಕ್ಯೂರಿಟಿಗಾಗಿ ಕೊಟ್ಟಿದ್ದು ಎಂದರೆ ಸರಿ. ಈ ಚೆಕ್ ನ್ನು ಹೊರತು ಪಡಿಸಿ ಬೇರೆ ಯಾವುದೇ ಚೆಕ್ ಇರುವುದಿಲ್ಲ. ಆರೋಪಿಗೆ ಕೊಟ್ಟ ಸಾಲದ ಬಗ್ಗೆ ನಾನು ಯಾವುಲೇ ಖಾತೆಯನ್ನು ಮೈಂಟೆನ್ ಮಾಡದೇ ಇದ್ದುದರಿಂದ ಆ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ದೂರು ದಾಖಲಿಸಲು ನನಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಆಡಳಿತ ಮಂಡಳಿಯ ಆದೇಶ ಆಗಿರುತ್ತದೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ